# ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ

## ಹೂವಿನಹಡಗಲಿ

## ಅಸಲು ದಾವೆ ನಂ ಃ57/2015

**ಪಿಡಬ್ಲೂ ಃ 01**

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕ ಃ 06-02-2019 ರಂದು ಸತ್ಯ ಪ್ರತಿಜ್ಞೆಯನ್ನು ಬೋಧಿಸಲಾಯಿತು.

ಮುಂದುವರೆದ ಪಾಟಿ ಸವಾಲು ಃ ಪ್ರತಿವಾದಿ ಪರ ಶ್ರೀ ಎಸ್ ಎಚ್ ಸಿ ವಕೀಲರಿಂದ

ನನಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿ ನನ್ನದೆ ಎಂದರೆ ಸರಿಯಲ್ಲ. ಸದ್ರಿ ದಾಖಲಾತಿಯನ್ನು ನೋಡಿ ಸಾಕ್ಷಿಯು ನನಗೆ ಓದಲು ಬರೆಯಲು ಬರುವುದಿಲ್ಲ ಅದರಲ್ಲಿರುವ ಸಹಿ ನನ್ನದಲ್ಲ. ನನಗೆ ವಕಾಲತ್ತನ್ನು ತೋರಿಸಲಾಗಿದ್ದು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ ಸದ್ರಿ ವಕಾಲತ್ತನ್ನು ಸಾಕ್ಷಿಯು ನೋಡಿ ಗುರ್ತಿಸಿದ್ದರಿಂದ ಅದನ್ನು ನಿಡಿ-01 ಎಂದು, ಸಾಕ್ಷಿಯ ಸಹಿಯನ್ನು ನಿಡಿ-01ಎ ಎಂದು ಗುರ್ತಿಸಲಾಯಿತು. ಕೊಡುವ ಮತ್ತು ತೆಗೆದುಕೊಳ್ಳುವ ವ್ಯವಹಾರವನ್ನು ಮಾಡುವ ಸಮಯದಲ್ಲಿ ನೀವು ಸಹಿಯನ್ನು ಮಾತ್ರ ಮಾಡುತ್ತೀರಿ ಎಂದರೆ ಸರಿ ನನಗೆ ಸಹಿ ಮಾತ್ರ ಮಾಡಲು ಬರುತ್ತದೆ. ಓದಲು ಬರೆಯಲು ಬರುವುದಿಲ್ಲ.

2. ದಿನಾಂಕ ಃ 28-06-1996 ರಂದು ನಾನು ಮತ್ತು ನನ್ನ ಅಣ್ಣತಮ್ಮಂದಿರು ಸೇರಿಕೊಂಡು ಪಾಲುಪಟ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆ ಪಾಲುಪಟ್ಟಿಯ ಪ್ರಕಾರವಾಗಿ ಆಸ್ತಿಗಳು ನಮ್ಮ ನಮ್ಮ ಹೆಸರಿನಲ್ಲಿ ಪ್ರತ್ಯೇಕವಾಗಿ ಇರುತ್ತವೆ ಎಂದರೆ ಸರಿಯಲ್ಲ. 01ನೇ ಪ್ರತಿವಾದಿಯ ಹೆಸರಿಗೆ ಸರ್ವೇ ನಂ. 3ಸಿ 5 ಎಕರೆ 26 ಸೆಂಟ್ಸ್ ಮತ್ತು ಸರ್ವೇ ನಂ.3ಎಬಿ ಪೈಕಿ 03 ಎಕರೆ 04 ಸೆಂಟ್ಸ್ ಜಮೀನು ಬಂದಿರುತ್ತದೆ ಎಂದರೆ ನಾವು ಪಾಲುಪಟ್ಟಿಯೆ ಮಾಡಿಕೊಂಡಿಲ್ಲ ಹಾಗಾಗಿ ಆ ಭೂಮಿ 01 ನೇ ಪ್ರತಿವಾದಿಗೆ ಹೊಗುವ ಸಂದರ್ಭವೇ ಇಲ್ಲ. ಸರ್ವೇ ನಂ. 149ಸಿ 02 ಎಕರೆ 90 ಸೆಂಟ್ಸ್ ನಲ್ಲಿ ನೀವು ಸಾಗುವಳಿಯಲ್ಲಿದ್ದು ಆ ಜಮೀನು ನಿಮ್ಮ ಸ್ವಾಧಿನದಲ್ಲಿರುತ್ತದೆ ಎಂದರೆ ಸರಿಯಲ್ಲ.

3. ನನ್ನ ಅಣ್ಣನಾದ ಮಸಲವಾಡದ ದಾನಪ್ಪನ ಹೆಸರಿಗೆ ಸರ್ವೇ ನಂ. 3ಎಬಿ ಪೈಕಿ 03 ಎಕರೆ 03 ಸೆಂಟ್ಸ್ ಜಮೀನು ಹಾಗೂ ಸರ್ವೇ ನಂ.127 ಪೈಕಿ 05 ಎಕರೆ ಜಮೀನು ಹಿಸ್ಸೆಗೆ ಬಂದಿರುತ್ತದೆ ಎಂದರೆ ಪಾಲುಪಟ್ಟಿ ಮಾಡಿಕೊಂಡಿಲ್ಲ . 02 ನೇ ಪ್ರತಿವಾದಿಗೆ ಸರ್ವೇ ನಂ.3ಎಬಿ ಪೈಕಿ 03 ಎಕರೆ 04 ಸೆಂಟ್ಸ್ ಹಾಗೂ ಸರ್ವೇ ನಂ. 127ಪೈಕಿ 05 ಎಕರೆ ಜಮೀನು ಬಂದಿರುತ್ತದೆ ಎಂದರೆ

ಸರಿಯಲ್ಲ. 03 ನೇ ಪ್ರತಿವಾದಿಗೆ ಸರ್ವೇ ನಂ.15ಎ/1 ಪೈಕಿ 01 ಎಕರೆ 49 4 ಸೆಂಟ್ಸ್ ಹಾಗೂ ಸರ್ವೇ ನಂ. 15 ಬಿ/1 ಪೈಕಿ 11 ಎಕರೆ 56 ಸೆಂಟ್ಸ್ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನಾವು ಪಾಲುಪಟ್ಟಿ ಮಾಡಿಕೊಂಡಿಲ್ಲ. ಈ ಜಮೀನಲ್ಲದೆ 03 ನೇ ಪ್ರತಿವಾದಿಗೆ ಹಿರೇಕೊಳಚಿ ಗ್ರಾಮದಲ್ಲಿರುವ ಡೋರ್ ನಂ.29 ರ ಮನೆಯು ಆತನ ಹೆಸರಿಗೆ ಬಂದಿರುತ್ತದೆ ಎಂದರೆ ಸರಿಯಲ್ಲ.

4. ಐಟಮ್ ನಂ.1 ರಿಂದ 3 ದಾವಾ ಆಸ್ತಿಗಳು ಹಿರಿಯರ ಆಸ್ತಿ ಎಂದರೆ ಸರಿ. . ಐಟಮ್ ನಂ.4 ರಿಂದ 8 ದಾವಾ ಆಸ್ತಿಗಳು 01 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಅವು ಎಲ್ಲರೂ ಕೂಡಿಕೊಂಡಿದ್ದಾಗ ಕೊಂಡುಕೊಂಡ ಆಸ್ತಿಯಾಗಿವೆ.

5. ಡೋರ್ ನಂ.29 ಹಿರಿಯರ ಆಸ್ತಿ ಎಂದರೆ ಸರಿ . ಡೋರ್ ನಂ.30 01 ನೇ ಪ್ರತಿವಾದಿ ಕೊಂಡುಕೊಂಡ ಆಸ್ತಿ ಎಂದರೆ ನನ್ನ ತಂದೆ ಬದುಕಿರುವಾಗಲೆ ನಾವೆಲ್ಲರೂ ಕೂಡಿಕೊಂಡಿದ್ದಾಗ ಕೊಂಡತಹ ಆಸ್ತಿಯಾಗಿರುತ್ತದೆ. 1996 ರ ನಂತರದಲ್ಲಿ ಪಾಲುಪಟ್ಟಿ ಅದ ಬಳಿಕ ಪಾಲುಪಟ್ಟಿಯ ಆಧಾರದ ಮೇಲೆ ಮ್ಯೂಟೇಶನ್‌ನ್ನು ಬದಲಾಯಿಸಿಕೊಡಿ ಎಂದು ತಹಶೀಲ್ದಾರವರ ಬಳಿಯಲ್ಲಿ ಅರ್ಜಿ ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ಈಗಲಾದರೂ ಆ ಅರ್ಜಿಯು ತಾಲೂಕು ಕಚೇರಿಯಲ್ಲಿ ಚಾಲ್ತಿಯಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ಮಾಡಿಸಲು ಕೊಟ್ಟಿದ್ದು 3 ಎಕರೆ 4 ಸೆಂಟ್ಸ್ ಗೆ ನಾನ್ಯಾಕೆ ಒಪ್ಪಿಕೊಳ್ಳಲಿ ಎಂದು ನ್ಯಾಯಾಲಯಕ್ಕೆ ದಾವೆ ಹಾಕಿರುತ್ತೇನೆ.

6. ಪಾಲುಪಟ್ಟಿಯಾದ ದಿನದಿಂದಲೂ ನೀವೆಲ್ಲಾ ಅಣ್ಣತಮ್ಮಂದಿರು ಬೇರೆ ಬೇರೆ ಆಗಿದ್ದು ಪ್ರತ್ಯೇಕವಾಗಿ ಪಿತ್ರಾರ್ಜಿತ ಆಸ್ತಿಗಳನ್ನು ಸ್ವಾಧೀನ ಮತ್ತು ಅನುಭೋಗ ಹೊಂದಿರುತ್ತೀರಿ ಎಂದರೆ ಸರಿಯಲ್ಲ.1996 ರ ಪಾಲುಪಟ್ಟಿಯಾದ ನಂತರ ನನ್ನ ಅಣ್ಣ ದಾನಪ್ಪ ತೀರಿಕೊಂಡಿರುತ್ತಾರೆ ಎಂದರೆ ಪಾಲುಪಟ್ಟಿ ಮಾಡಿಕೊಂಡಿಲ್ಲ ಆದರೆ ದಾನಪ್ಪ ತೀರಿಕೊಂಡಿರುವುದು ನಿಜ ಯಾವ ವರ್ಷದಲ್ಲಿ ತೀರಿಕೊಂಡರು ಎಂದು ನನಗೆ ಗೊತ್ತಿಲ್ಲ. ಅಂದಾಜು ಅವರು ಎಷ್ಟು ವರ್ಷದ ಹಿಂದೆ ತೀರಿಕೊಂಡಿರುತ್ತಾರೆ ಎಂದರೆ ಅಂದಾಜು 15 ವರ್ಷವಾಗಿರಬಹುದು. ಪಾಲುಪಟ್ಟಿಯ ಪ್ರಕಾರವಾಗಿ ಆ ಆಸ್ತಿಯು ದಾನಪ್ಪನಿಗೆ ಬಂದಿದ್ದು ಆತನ ಮರಣಾನಂತರದಲ್ಲಿ 04 ನೇ ಪ್ರತಿವಾದಿ ಪಾಲುಪಟ್ಟಿಯಲ್ಲಿ ದಾನಪ್ಪನಿಗೆ ಬಂದ ಆಸ್ತಿಯಲ್ಲಿ 04 ನೇ ಪ್ರತಿವಾದಿ ಸ್ವಾಧೀನ ಮತ್ತು ಅನುಭೋಗ ಹೊಂದಿರುತ್ತಾರೆ ಅಂದರೆ ಪಾಲುಪಟ್ಟಿಯೇ ಆಗಿಲ್ಲ. ಮ್ಯೂಟೇಶನ್ ಆಗುವ ಸಮಯಲ್ಲಿ ತಕರಾರನ್ನು ಕೊಟ್ಟಿರುತ್ತೀರಾ ಎಂದರೆ ಅವರು ತಾಲೂಕು ಕಚೇರಿಗೆ ಹೋಗಿದ್ದು ನನಗೆ ಗೋತ್ತಿರಲಿಲ್ಲ ಅದು ಗೊತ್ತಾದ ಮೇಲೆ ನಾನು ತಾಲೂಕು ಕಚೇರಿಯಲ್ಲಿ ತಕರಾರನ್ನು ಕೊಟ್ಟಿರುತ್ತೇನೆ. ಮ್ಯೂಟೇಶನ್ ಮಾಡಿಸುವ ಸಮಯದಲ್ಲಿ ನನ್ನನ್ನು ಸಹ ತಾಲೂಕು ಕಚೇರಿಗೆ ಕರೆದುಕೊಂಡು ಹೋಗಿದ್ದರು

ಆಗ ನನಗೆ ಮ್ಯೂಟೇಶನ್‌ಗೆ ಪಾಲುಪಟ್ಟಿಯನ್ನು ಹಾಜರುಪಡಿಸಿ ಖಾತೆ ಬದಲಾಯಿಸಲು ನೀಡಿರುವ ಅರ್ಜಿಯ ಬಗ್ಗೆ ಗೊತ್ತಾಗಿರುತ್ತದೆ ಅಲ್ಲಿಯತನಕ ನನಗೆ ಪಾಲುಪಟ್ಟಿಯ ವಿಷಯ ಗೊತ್ತಿರಲಿಲ್ಲ. ಪಾಲುಪಟ್ಟಿಯ ವಿಷಯ ನಿಮಗೆ ಗೊತ್ತಿದ್ದು ನೀವು ಮತ್ತು ನಿಮ್ಮ ಅಣ್ಣತಮ್ಮಂದಿರು ಸಹಿ ಮಾಡಿರುತ್ತೀರಿ ಎಂದರೆ ಒಬ್ಬರಿಗೆ 3 ಎಕರೆ, ಒಬ್ಬರಿಗೆ 4 ಎಕರೆ, , ಒಬ್ಬರಿಗೆ 7 ಎಕರೆ ಹೀಗೆ ಸರಿಯಾಗಿ ಪಾಲುಪಟ್ಟಿಯನ್ನು ಮಾಡದೇ ಇರುವುದರಿಂದ ಮತ್ತು ಪಾಲುಪಟ್ಟಿಯನ್ನು ಸೃಷ್ಟಿ ಮಾಡಿರುವುದರಿಂದ ನಾನು ನ್ಯಾಯಾಲಯಕ್ಕೆ ಬಂದಿರುತ್ತೇನೆ. ಪಾಲುಪಟ್ಟಿಯ ವಿಷಯ ಗೊತ್ತಿದ್ದರು ಸಹ ಗೊತ್ತಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

7. ಬೆನ್ನೂರು ಷಡಾಕ್ಷರಪ್ಪ , ಎಲ್ ರೇವಣಪ್ಪ , ಕೆ ಚೆನ್ನಬಸಪ್ಪ , ಹೆದ್ದಾರಿ ಮಲ್ಲಪ್ಪ , ಮತ್ತು ಹಾಲಪ್ಪ ನಮ್ಮ ಊರಿನವರು ಎಂದರೆ ಬೇರೆ ಊರಿನ ಮೂವರನ್ನು ಕರೆದುಕೊಂಡು ಬಂದಿರುತ್ತಾರೆ ನಮ್ಮ ಊರಿನ ಇಬ್ಬರನ್ನು ಕರೆದುಕೊಂಡು ಬಂದಿರುತ್ತಾರೆ ಹಾಗಾಗಿ ಅದು ಸೃಷ್ಟಿ ಮಾಡಿದ ಪಾಲುಪಟ್ಟಿ ಎಂದು ನಾನು ಹೇಳುತ್ತಿದ್ದೇನೆ. ನಿವೇಲ್ಲಾ ಅಣ್ಣತಮ್ಮಂದಿರು ಸೇರಿಕೊಂಡು ಪಾಲುಪಟ್ಟಿಯನ್ನು ಮಾಡಿಕೊಂಡಿರುತ್ತೀರಿ ಎಂದರೆ ನನಗೆ ಕಳೆದ ವರ್ಷ ತಾಲೂಕು ಕಚೇರಿಗೆ ಹೋದಾಗ ಪಾಲುಪಟ್ಟಿಯ ವಿಚಾರ ಗೊತ್ತಾಗಿರುತ್ತದೆ. ಪಾಲುಪಟ್ಟಿ ಆದರೂ ಸಹ ಪಾಲುಪಟ್ಟಿ ಅಗಿಲ್ಲವೆಂದು ಸುಳ್ಳು ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಿಮಗೆ ಹಿಸ್ಸೆ ಇರುತ್ತದೆ ಸುಳ್ಳು ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿರುತ್ತದೆ ಎಂದು ನಿಮಗೆ ಗೊತ್ತಿರುತ್ತದೆಯೇ ಎಂದರೆ ಇಲ್ಲ. ನೀವು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪ್ರತಿವಾದಿಯರ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ ಅನುಮತಿಯ ಮೇರೆಗೆ ಕಾಲಾವಕಾಶವನ್ನು ನೀಡಲಾಯಿತು)

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ,

ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೂವಿನಹಡಗಲಿ.

ಎಸ್. ಜಿ. ಬಿ
ಬೆರಳಚ್ಚುಗಾರರು.

.